ಚಲಿಸದಂತೆ ದತ್ತು ಎಲ್ಲರ ಮ್ಯಾಲ ಹಿಡಿತ ಸಾಧಿಸಿಬಿಟ್ಟಿದ್ದ. ಬಂದಾಗ ಬೇಕು ಬೇಕಾದ್ದನ್ನೆಲ್ಲ ಪೂರೈಸುತ್ತಿದ್ದುದರಿಂದ ಮೇಲಾಧಿಕಾರಿಗಳೂ ಅವನ ಬುಟ್ಟಿವಳಗಿದ್ದರು. ಹಿಂಗಾಗಿ ದತ್ತುನೊಳಗ ಧೂರ್ತನೊಬ್ಬ ಅಡಗಿರುವ ಸಂಗತಿ ಗೊತ್ತಿದ್ದರೂ ಅನಿವಾರ್ಯಕ್ಕೆ ಒದಗುತ್ತಿದ್ದುದರಿಂದ ಯಾರೂ ಅವನನ್ನು ನಿವಾರಿಸಿಕೊಳ್ಳುವುದಿರಲಿ, ದೂರ ಮಾಡುವ ಪ್ರಯತ್ನಕ್ಕೆ ಸುದ್ಧಾ ಕೈ ಹಾಕಿರಲಿಲ್ಲ.

ಸಂಜೆ ನಾಕರ ನಂತರ ಚಹಾ ಕುಡಿದಾದ ಮ್ಯಾಲ ಹಂಗಾರ ಈಗ ದತ್ತೂನ ಭೇಟಿಯಾಗಿ ಬರೋಣು ಎಂದು ಶರಣಪ್ಪ ತಯಾರಾಗುತ್ತಿದ್ದಂತೆ ಮೊಬೈಲ್ ಕೂಗಲಿಕ್ಕೆ ಹತ್ತ್ಯು. ನೋಡಿದರೆ ಆ ಕಡೆಯಿಂದ ದತ್ತು!

'ಶರಣಪ್ಪ, ಆಫೀಸಿನ ಕಡೆ ಬರ್‍ತೀರೇನು, ತುಸು ಮಾತಾಡೋದಿತ್ತು.'

'ಆತು ಬಂದೇ...'

'ಲಗೂ ಬರ್‍ರೀ...'

ಶರಣಪ್ಪನ ಮಾರಿ ಅರಳಿ ಹೋತು. ನೆನೆದವರ ಮನದಲ್ಲಿ ಅಂತಾರಲ್ಲ ಹಂಗ ದತ್ತು ಪ್ರತ್ಯಕ್ಷ ಆಗಿದ್ದಕ್ಕೆ ರೋಮಾಂಚನ! ಇದಪ್ಪಾ ಯೋಗ ಅಂದ್ರೆ. ಅಂದುಕೊಳ್ಳುತ್ತ ಮೆಟ್ಟಿಲಿಳಿದವನು ನಡೆದು ಹೋಗುವಷ್ಟಿದ್ದ ದಾರಿಗೆ ರಿಕ್ಷಾ ಕರೆದ. ಆಫೀಸಿನ ಕಡೆ ರಿಕ್ಷಾ ಕರೆದ. ಆಫೀಸಿನ ಕಡೆ ರಿಕ್ಷಾ ಹೊರಳುತ್ತಿದ್ದಂತೆ ಫಕ್ಕನೆ ಮನದಲ್ಲಿ ಗೊಂದಲ– ದತ್ತು ಯಾಕೆ ಕರೆದ? ಲಗೂ ಬರ್‍ರಿ ಅಂತ ಬ್ಯಾರೇ ಅಂದ– ಅಂಥ ತಲಿ ಹೋಗುವ ಕೆಲಸ ಏನಿದ್ದೀತು. ಅದೂ ತನ್ನ ಹತ್ರ– ರಿಟೈರ್ ಮನುಷ್ಯಾನ ಹತ್ರ?

ದತ್ತು ಈಗ ಮೊದಲಿನಂತಿಲ್ಲ. ಯಾವಾಗೂ ಸೂಟಿನೊಳಗs ಇರತಾನs ಮೊದಲs ಶಿಸ್ತುಗಾರ, ಈಗಂತೂ ಕೇಳೂದs ಬ್ಯಾಡ ಎಂದುಕೊಳ್ಳುತ್ತ ಸಾಗಿದ ಶರಣಪ್ಪ ನೆಟ್ಟಗೆ ದತ್ತೂನ ಕ್ಯಾಂಟಿನ್ ಕಡೆ ನಡೆದ. ಯಾರೊಂದಿಗೋ ಮಾತಾಡುತ್ತಿದ್ದ ದತ್ತು ಸನ್ನೆಯ ಮೂಲಕ ನಮಸ್ಕಾರದ ಚಮತ್ಕಾರ ಪ್ರದರ್ಶಿಸಿ ಕುರ್ಚಿ ತೋರಿಸಿದ. ಶರಣಪ್ಪ ಕೂತ. ಈಗ ದತ್ತೂಗೆ ಪ್ರಮೋಷನ್ ಆಗ್ಯದ. ಗುಳೇದ ಸಾಹೇಬರು ಕೂಡುತ್ತಿದ್ದ ಸೀಟಿನೊಳಗs ಅಂವ ಕೂತಾನ. ಅಧಿಕಾರದ ಕಾರಣ ಅವನಿಗೊಂದು ಗತ್ತು ಬಂದ ಭಾಸ. ನೋಡುತ್ತ ಶರಣಪ್ಪನಿಗೆ ಪಿಚ್ಚೆನಿಸದಿರಲಿಲ್ಲ. ತಾನು ಸುದ್ಧಾ ಮನಸ್ಸು ಮಾಡಿದ್ದರೆ ಇದೇ ಕುರ್ಚಿದೊಳಗ ಕೂತು ಹೀಂಗ ದೌಲತ್ತು ನಡೆಸಬಹುದಿತ್ತು!

'ಚಹಾ ತಗೋತೀರೇನು?' ಮೊಬೈಲ್‌ನಲ್ಲಿ ಮಾತು ಮುಗಿಸಿ ದತ್ತು ಕೇಳಿದ.

'ಮನಿವಳಗ ಆಗ್ಯದ...'

'ಹಂಗಾರ ಹೋಗೋಣ ಬರ್‍ರೀ...' ದತ್ತು ಎದ್ದು ನಿಂತಾಗ ಶರಣಪ್ಪನಿಗೆ ಅಚ್ಚರಿ. ಎಲ್ಲಿಗೆ ಎಂಬ ಮಾತು ಗಂಟಲಿನಿಂದ ಹೊರ ಬರಲಿಲ್ಲ.

ಮೆಟ್ಟಿಲಿಳಿದ ದತ್ತು ನಾಕು ಹೆಜ್ಜೆ ಸಾಗಿ ಕಾರಿನ ಬಾಗಿಲು ತೆರೆದ. ಶರಣಪ್ಪ ಕಣ್ಣರಳಿಸಿದ. ಏನದರ ನುಣುಪು, ಕಲರ್‍ರು. ಮುಟ್ಟಿದರೆ ಎಲ್ಲಿ ಮಾಸುತ್ತದೋ ಅನ್ನುವಂಥ ಹೊಳಪು. ಒಳಗೆ ಕೂತರೆ ಮೈ ತಬ್ಬುವ ಕುಷನ್ನು! ಹೊರಟಿದ್ದು ಗೊತ್ತೇ ಆಗಲಿಲ್ಲ... ಪುಷ್ಪಕ ವಿಮಾನದ ಭ್ರಮೆ.

'ಅಂದ ಹಾಂಗ ನಿಮ್ಮ ಹುಡುಗ... ಏನವನ ಹೆಸರು?'

'ಮಂಜು... ಮಂಜುನಾಥ...'

'ಈಗ ಮನೀವಳಗ ಇದ್ದಾನೇನು?'

'ಮೂರು ಹೊತ್ತೂ ಗೆಳೆಯಾರು ಅಂತ ಹೊರಗ ಇರ್‍ತಾನ. ಯಾವಾಗ ಬರ್‍ತಾನ, ಹೋಗ್ತಾನ ಒಂದೂ ಗೊತ್ತಾಗೂದಿಲ್ಲ.'

'ಈಗ ಅವನ್ನ ನೋಡ್ಲಿಕ್ಕೇ ಹೊಂಟೇವಿ...'